Date : 25.07.2026

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**– ಮುಂದುವರಿದ ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ ಕೆ.ವಿ.ಸಿ. ವಕೀಲರಿಂದ –**

ನಾನು ಈ ಕೇಸಿನಲ್ಲಿ ಅರ್ಜಿದಾರನಿದ್ದು, ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿ ಇರುತ್ತವೆ.

ನನ್ನ ಸಾಕ್ಷಿಗೆ ಬೆಂಬಲಿತವಾಗಿ, ದಿಃ **06.05.2024** ರ ದಿನಾಂಕದ ಒಂದು ಹಿಂಬರಹ ಮತ್ತು ಅರ್ಜಿಯಲ್ಲಿ ಕಾಣಿಸಿದ ಆಸ್ತಿಯ ಬಗ್ಗೆ ಇರುವ **2** ಪಹಣಿ ಪ್ರತಿ ಮತ್ತು ದಿಃ **02.06.2023** ರ ದಿನಾಂಕದ ಅವಾರ್ಡ ನೋಟೀಸಿನ ನಕಲು ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–**1** ರಿಂದ **4** ಎಂದು, ಚಿತ್ರದುರ್ಗ ತಾಲ್ಲೂಕು ಡಿ.ಎಸ್. ಹಳ್ಳಿ ಗ್ರಾಮದ **497/1** ಆಸ್ತಿ ಮತ್ತು ಇತರೆ ಆಸ್ತಿಗಳ ಬಗ್ಗೆ ಇರುವ ನಕಾಶೆಯ ನಕಲು ದೃಢೀಕೃತ ಪ್ರತಿ ಮತ್ತು ನನ್ನ ಮಾಲೀಕತ್ವದ ಜಮೀನನ್ನು ಎದುರುದಾರರು ಭೂಸ್ವಾಧೀನಪಡಿಸಿಕೊಂಡ ಬಾಬ್ತು ನನಗೆ ಪರಿಹಾರ ನೀಡಿದ ಬಗ್ಗೆ ತೋರಿಸಲು ಇರುವ ಓಚರ್ ನ ನಕಲು ದೃಢೀಕೃತ ಪ್ರತಿ, ಅವಾರ್ಡ ತಃಖ್ತೆಯ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–5 ಮತ್ತು 7 ಎಂದು, ದಿಃ 28.10.2017 ರಂದು ರಾ.ಹೆ.ಯ ವಿಶೇಷ ಭೂಸ್ವಾಧೀನಾಧಿಕಾರಿಯವರು ಹೊರಡಿಸಿದ ಐತೀರ್ಪಿನ ನಕಲು ದೃಢೀಕೃತ ಪ್ರತಿ ಮತ್ತು ಅನುಸೂಚಿ–ಎ ನ ನಕಲು ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–8 ಮತ್ತು 9 ಎಂದು, ಚಿತ್ರದುರ್ಗ ತಾಲ್ಲೂಕು ಡಿ.ಎಸ್ ಹಳ್ಳಿ ಗ್ರಾಮದ ಸರ್ವೆ ನಂ. 484/18, 484/19, 447/7, 447/1, 447/6, 447/4, 447/12, 447/10 ಮತ್ತು 447/11 ಆಸ್ತಿಯ ಬಗ್ಗೆ ಇರುವ ಪಹಣಿ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ನಿಪಿ– 10 ರಿಂದ 18 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ವಕೀಲರು ಕಾಲಾವಕಾಶ ಕೋರುತ್ತಿದ್ದು, ಕಾಲಾವಕಾಶ ನೀಡಿ ಮುಖ್ಯ ವಿಚಾರಣೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

*ಓದಿ ಹೇಳಿ ಕೇಳಿ ಸರಿ ಇದೆ.*

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.